Posts of Doctors Vacant in Government Hospitals and Health Centres.

*Q.—553. Sri A. J. DODDAMETI (Ron).—

Will the Government be pleased to state :—

(*a*) the number of posts of Doctors vacant in Government Hospitals and Health Centres;

(*b*) out of them the number of posts vacant in urban areas and rural areas;

(*c*) the action taken by them to fill up these posts ?

A.—Sri Dr. K. NAGAPPA ALVA (Minister for Health).—

(*a*) 517.

(*b*) Urban areas ... 209
Rural areas .. 308

(*c*)—

(i) Common recruitment rules (both for Medical and Public Health Departments) are being framed.

(ii) Re-employment, appointment on contract basis and appointment as Honorary and Part-time Medical Officers of all available Doctors.

ಶ್ರೀ ಕೆ. ನಾಗಪ್ಪ ಆಳ್ವ.—ಉತ್ತರದಲ್ಲಿ ಕೊಟ್ಟಿರುವ ಸಂಖ್ಯೆಗೆ ಸಣ್ಣ ತಿದ್ದುಪಡಿ ಇದೆ. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ ಸೆಲೆಕ್ಷನ್ ಆಗಿದ್ದು ಪೋಸ್ಟ್ ಗ್ರ್ಯಾಜ್ಯುಯೇಟ್ ಸ್ಟೇಟಸ್ಸಿನ ಡಾಕ್ಟರ್ಸ್ ಬಂದಿದ್ದಾರೆ. ಉತ್ತರ (ಎ) ನಲ್ಲಿ 517 ಎಂದು ಇರುವುದನ್ನು 391 ಎಂದು ಓದಿಕೊಳ್ಳತಕ್ಕದು; ಉತ್ತರ (ಬ) ನಲ್ಲಿ 209 ಮತ್ತು 308 ಎಂದಿರುವುದನ್ನು ಅನುಕ್ರಮವಾಗಿ 156 ಮತ್ತು 256 ಎಂದು ಓದಿಕೊಳ್ಳಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ರಾಜ್ಯದಲ್ಲಿರುವ ಆಸ್ಪತ್ರೆಗಳ ಪ್ರಮಾಣ ನಗರಗಳಲ್ಲಿ ಹಾಗು ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಇದೆ ?

ಶ್ರೀ ಕೆ. ನಾಗಪ್ಪ ಆಳ್ವ.—ರೂರಲ್ ಏರಿಯಾದಲ್ಲಿ 987 ಇವೆ. ಅರ್ಬನ್ ಏರಿಯಾದಲ್ಲಿ ಎಷ್ಟು ಇವೆ ಎಂಬುದಕ್ಕೆ ಖಚಿತವಾದ ಅಂಕಿ ಈಗ ನನ್ನ ಹತ್ತಿರ ಇಲ್ಲ. ನುಮಾರು 45 ಇರಬಹುದು ಎಂದು ಅನಿಸುತ್ತದೆ.

Smt. BASAVARAJESHWARI.—May I know the number of vacancies in the Health Centres in Raichur District ?

Sri K. NAGAPPA ALVA —I do not have district-wise figures.

ಶ್ರೀ ಎ. ಜೆ. ದೊಡ್ಡಮೇಟಿ.—ಉತ್ತರದಲ್ಲಿ ಹೇಳಿದ ಹಾಗೆ ಕ್ರಮ ತೆಗೆದುಕೊಂಡಿರುವುದರ ಪರಿಣಾಮವಾಗಿ ಹೆಚ್ಚಿಗೆ ಡಾಕ್ಟರ್ಸ್ ಬಂದಿದ್ದಾರೆಯೇ ? ಇದಕ್ಕೆ ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಕ್ರಮ ಕೈಕೊಂಡಿರುವುದರಿಂದ ಹೆಚ್ಚು ಡಾಕ್ಟರ್ಸ್ ಬಂದಿದ್ದಾರೆ. ಅಲ್ಲದೆ ಈ ಕೆಲಸ ಸಾಧ್ಯವಾದ ಮಟ್ಟಿಗೆ ಸರಿಯಾಗಿ ನಡೆಯುವುದಕ್ಕೆ ಅನರರಿ ಡಾಕ್ಟರ್ಸ್ ಅನ್ನು ಅಪಾಯಿಂಟ್ ಮಾಡಲು 176 ಪೋಸ್ಟ್ಸ್ ಕ್ರಿಯೇಟ್ ಮಾಡಿದೆ. ಇದರಲ್ಲಿ 113 ಡಾಕ್ಟರ್ಸ್ ಡಿಸ್ಪೆನ್ಸ್ಕ್ಟ್ ಹಾಗು ತಾಲ್ಲೂಕ್ ಲೆವೆಲ್ಲಿನಲ್ಲಿ ಕೆಲಸ ಮಾಡುತ್ತಿದ್ದಾರೆ.

Smt. BASAVARAJESHWARI.—Has it come to the notice of Government that many health centres are running without doctors since 2 or 3 years ?

Sri K. NAGAPPA ALVA.—There are some hospitals which are working without doctors; but in charge arrangements have been made.

ಶ್ರೀ ಸಿದ್ದಯ್ಯ ಕಾಶೀಮಠ.—ರೂರಲ್ ಏರಿಯಾಗಳಲ್ಲಿ ಡಾಕ್ಟರುಗಳ ಕೊರತೆ ಬಹಳ ಇರುವುದರಿಂದ, ಮೈನೂರು ಜಿ. ಎ. ಎಂ. ಎಸ್. ಪಾಸಾದ ಡಾಕ್ಟರಿಗೆ ನೌಕರಿ ಕೊಡುವುದಕ್ಕೆ ಸಾಧ್ಯವೆ ?

ಶ್ರೀ ಕೆ. ನಾಗಪ್ಪ ಆಳ್ವ.—ತಾಲ್ಲೂಕು ಬೋರ್ಡು ಕೆಳಗಿರುವ ಕೆಲವು ಹೆಲ್ತ್ ಯೂನಿಟ್ಟುಗಳಿಗೆ ಇಂಟ್‌ಗ್ರೇಟೆಟ್ ಸಿನ್ಪಮ್ಮುಗಳನ್ನೂ ಸೇರಿಸಿಕೊಳ್ಳುವ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಗೋಪಾಲರಾವ್ ಮುಡ್ಪಿ.—ರೂರರ್ ಏರಿಯಾದಲ್ಲಿ ಎಷ್ಟು ವೇಕೆನ್ಸಿಗಳಿವೆ? ಅರ್ಬನ್ ಏರಿಯಾದಲ್ಲಿ ಎಷ್ಟಿವೆ?

ಶ್ರೀ ಕೆ. ನಾಗಪ್ಪ ಆಳ್ವ.—ಅದನ್ನು ಆಗಲೇ ಹೇಳಿದೆ: ರೂರಲ್ ಏರಿಯಾಗಳಲ್ಲಿ 235 ವೇಕೆನ್ಸಿಗಳಿವೆ; ಅರ್ಬನ್ ಏರಿಯಾಗಳಲ್ಲಿ 156.

ಶ್ರೀ ಪಿ. ವೆಂಕಟಗಿರಿಯಪ್ಪ.—ಎಲ್. ಎಂ. ಪಿ. ಯವರು ಕಂಡೆನ್ಸ್‌ಡ್ ಎಂ. ಬಿ. ಬಿ. ಎಸ್. ಕೋರ್ಸು ಮಾಡಿಕೊಂಡು 2-3 ವರ್ಷವಾದರೂ, ಎಂ.ಬಿ.ಬಿ.ಎಸ್. ಸ್ಕೇಲು ಕೊಡದಿರುವುದು ಡಾಕ್ಟರುಗಳ ಅಭಾವಕ್ಕೆ ಕಾರಣವಲ್ಲವೆ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಕಾರಣವಲ್ಲ.

ಒಬ್ಬ ಸದಸ್ಯರು.—ಡಾಕ್ಟರು ಬಾರದಿರುವುದಕ್ಕೆ ಮೈನೂರು ಸರಕಾರ ಸಂಬಳದ ಸ್ಕೇಲು ಕಾರಣವಲ್ಲವೆ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಸ್ವಲ್ಪಮಟ್ಟಿಗೆ ಕಾರಣವಿರಬಹುದು. ಅದಕ್ಕಾಗಿ ಅವರಿಗೆ ಬೇಗ ಹೆಚ್ಚು ಸ್ಕೇಲು ಜಾಸ್ತಿ ಮಾಡುತ್ತೇವೆ.

Sri R. N. LAXMIPATHI.—The Minister has said that nearly 400 hospitals are without doctors. What are the steps contemplated to be taken to see that doctors are posted to all the hospitals? Do they contemplate increasing the salaries of doctors on par with the salaries prevailing in adjoining States?

Sri K. NAGAPPA ALVA.—Yes, that is under consideration.

Sri R. S. HEGDE.—Is it not a fact that in the interests of health administration, both the services, namely, health and medical should be kept separated?

Sri K. NAGAPPA ALVA.—In the interests of good administration, it is good that these departments are amalgamated.

Sri G. V. GOWDA.—Is there any proposal to give a special allowance to doctors who would like to work in rural parts?

Sri K. NAGAPPA ALVA.—Already there is what is called rural allowance. We are even thinking of increasing that allowance.

ಶ್ರೀಮತಿ ಸುಶೀಲಾ ಬಾ ಹೀರಾಜಂದ ಪಾ.—ಬಿಜಾಪುರ ಆಸ್ಪತ್ರೆಗೆ ಎಕ್ಸ್-ರೆ ಬಂದಮೇಲೆ, ಅದಕ್ಕೆ ತರಹೇತಾದ ಡಾಕ್ಟರಿಲ್ಲ. ಅದಕ್ಕಾಗಿ ರೋಗಿಗಳು ಹೋಲಾಪುರ ಅಥವಾ ಮಿರ್ಜಿಗೆ ಹೋಗಬೇಕು. ಅಲ್ಲಿಗೆ ಎಕ್ಸ್-ರೆ ಡಾಕ್ಟರನ್ನು ಯಾವಾಗ ಹಾಕುತ್ತೀರ?

Sri K. NAGAPPA ALVA.—A separate question in this regard may be put.

ಶ್ರೀ ಸಿದ್ಧಯ್ಯ ಕಾಶೀಮಠ.—ನಮ್ಮ ರಾಜ್ಯದಿಂದ ಪಾಶ್ಚಿಮಾತ್ಯ ದೇಶಗಳಿಗೆ ಎಷ್ಟುಮಂದಿ ಡಾಕ್ಟರುಗಳನ್ನು ಹೆಚ್ಚಿನ ವ್ಯಾಸಂಗಕ್ಕಾಗಿ ಕಳುಹಿಸಿದ್ದೀರಿ?

Sri K. NAGAPPA ALVA.—For the post-graduate courses there are in our State 68 doctors and outside our State within India, there are 26 doctors and outside India 64 doctors.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ 400 ವೇಕೆನ್ಸಿಗಳಿವೆ. ಅವುಗಳನ್ನು ಜಿಲ್ಲಾವಾರು ಹೇಳಲಿಕ್ಕೆ ಆಗುತ್ತದೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ಡಿಸ್ಟ್ರಿಕ್ಟ್ ವೈಸ್ ಫಿಗರ್ಸು ಇಲ್ಲಿಲ್ಲ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ನಗರ ಪ್ರದೇಶಗಳಲ್ಲಿ 209, ಗ್ರಾಮಾಂತರ ಪ್ರದೇಶಗಳಲ್ಲಿ 308 ಬುದ್ದಿಗಳು ಖಾಲಿ ಇವೆಯೆಂದರೆ, ಮೈನೂರು ದೇಶದಲ್ಲಿರುವ 5-6 ಮೆಡಿಕಲ್ ಕಾಲೇಜುಗಳಿಂದ ಹೊರಗೆ ಬಂದ ಡಾಕ್ಟರುಗಳು ಎಲ್ಲಿಗೆ ಹೋಗುತ್ತಿದ್ದಾರೆ?

ಶ್ರೀ ಕೆ. ನಾಗಪ್ಪ ಆಳ್ವ.—ಡಾಕ್ಟರುಗಳು ಕಾಲೇಜುಗಳಿಂದ ಬಂದವರು ಬೇರೆ ಬೇರೆ ಕಡೆಗೆ ಹೋಗುತ್ತಿದ್ದಾರೆ. ಕೆಲವರು ಸರಕಾರಿ ನೌಕರಿಗೆ ಬರುತ್ತಿದ್ದಾರೆ; ಕೆಲವರು ಪ್ರೈವೇಟು ಪ್ರಾಕ್ಟೀಷನರುಗಳಾಗುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಸ್ಯಾಮಿ, ಗ್ರಾಮಾಂತರ ಪ್ರದೇಶಗಳಲ್ಲಿ 308 ವೈದ್ಯರ ಹುದ್ದೆಗಳು ಖಾಲಿ ಇವೆಯೆಂದು ಹೇಳಿದ್ದೀರಿ. ಮಲೆನಾಡು ಪ್ರದೇಶದಲ್ಲಿ, ಅದರಲ್ಲಿಯೂ ಶಿವಮೊಗ್ಗ ಜಿಲ್ಲೆಯಲ್ಲಿ, ಎಷ್ಟುಕಡೆ ಡಾಕ್ಟರುಗಳು ಇಲ್ಲವೆಂದು ಹೇಳುವುದಕ್ಕೆ ಸಾಧ್ಯವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಪ್ರತ್ಯೇಕ ಪ್ರತ್ಯೇಕವಾಗಿ ಇಲ್ಲ ಅಂಕಿ ಸಂಖ್ಯೆಗಳಿಲ್ಲ.

ಶ್ರೀ ಎನ್. ಸುಬ್ಬಯ್ಯನಾಯಕ್.—ಈಗ ಡಾಕ್ಟರುಗಳಿಲ್ಲದ ಆಸ್ಪತ್ರೆಗಳಲ್ಲ ಇನ್-ಚಾರ್ಜ್ ಅರೇಂಜ್ ಮೆಂಟು ಮಾಡಿದ್ದೇವೆಂದು ಹೇಳಿದಿರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಬಂದು ನೆರೆ ಬಂದಾಗ, 4 ತಿಂಗಳಿಗೆ, ಸಾರಿಗೆ ಸಂಪರ್ಕವಿಲ್ಲದೆ, ಹೋಗುವುದಕ್ಕೆ ಸಾಧ್ಯವಿಲ್ಲ; ಅಲ್ಲಿಗೆ ಪ್ರಥಮ ಪ್ರಾಶಸ್ತ್ಯ ಕೊಡಲು ಪ್ರಯತ್ನ ಮಾಡುತ್ತೀರಾ ?

Sri K. NAGAPPA ALVA.—It is a suggestion for action.

ಶ್ರೀ ಅನ್ನದಾನಯ್ಯ.—ಬೆಂಗಳೂರಿನಲ್ಲಿ ಬೌರಿಂಗ್ ಮತ್ತು ವಿಕ್ಟೋರಿಯ ಆಸ್ಪತ್ರೆಗಳಲ್ಲಿ ಕೆಲಸವಿಲ್ಲದೆ, ಹೆಚ್ಚು ಸಂಖ್ಯೆಯಲ್ಲಿ ಡಾಕ್ಟರುಗಳಿದ್ದಾರೆ. ಆ ಡಾಕ್ಟರುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಏಕೆ ಟ್ರಾನ್ಸ್‌ಫರ್ ಮಾಡಬಾರದು ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಸರಿಯಾದ ಅಭಿಪ್ರಾಯವಲ್ಲ. ನಿಜವಾಗಿ ನೋಡಿದರೆ, ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಲ್ಲಿ ಕೂಡ ಡಾಕ್ಟರುಗಳು ಕಡಿಮೆ ಸಂಖ್ಯೆಯಲ್ಲಿದ್ದಾರೆ; ಅಲ್ಲಿರುವ ಡಾಕ್ಟರುಗಳು ಸ್ಯಾಂಕನ್ಡ್ ಸ್ಟೈಗಿಗೆ ಸರಿಹೋಗುವುದಿಲ್ಲ. ಹೌಸ್ ಸರ್ಜನ್ನುಗಳು ಹೆಚ್ಚಾಗಿ ವರ್ಕ್ ಮಾಡುವುದರಿಂದ, ಹೆಚ್ಚಾಗಿ ಇದ್ದಹಾಗೆ ಕಾಣಬಹುದು.

Smt. BASAVARAJESHWARI.—In view of the reply given by the Minister that in charge arrangements are being made, has it come to the notice of Government that in charge arrangements are made only through taluk boards, and not through primary health dispensaries ?

Sri K. NAGAPPA ALVA.—That arrangement cannot be made. For other health units and other dispensaries, such arrangements have been made.

ಶ್ರೀ ಬಿ. ಭಾಸ್ಕರಶೆಟ್ಟಿ.—ಸರಕಾರಿ ಮೆಡಿಕಲ್ ಕಾಲೇಜಿನಿಂದ ಎಂ. ಬಿ. ಬಿ. ಎಸ್. ಪಾಸಾಗಿ, ಬೆಂಗಳೂರಿನಲ್ಲಿ ಹೌಸ್ ಸರ್ಜನ್ ಆಗಿ ಟ್ರೇನಿಂಗ್ ಮುಗಿಸಿದ ಅನೇಕರು ಆಸ್ಪತ್ರೆಗಳಲ್ಲ ಇನ್ನೂ ಟೆಂಪೊರರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಏಕೆ ಪೋಸ್ಟು ಮಾಡಬಾರದು ;

ಶ್ರೀ ಕೆ. ನಾಗಪ್ಪ ಆಳ್ವ.—ಅಂಥವರೇನೂ ಇಲ್ಲ. ಹೌಸ್ ಸರ್ಜನ್ನಾಗಿ ಇಷ್ಟು ಸಮಯ ಕೆಲಸ ಮಾಡಬೇಕೆಂದಿದೆ; ಅಷ್ಟು ಸಮಯವಾದಮೇಲೆ ಅವರನ್ನು ಅಪಾಯಿಂಟ್ ಮಾಡಿದರೆ, ಅವರು ಆಸ್ಪತ್ರೆಗಳಲ್ಲಿರಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಗ್ರಾಮಾಂತರ ಪ್ರದೇಶಗಳಲ್ಲಿ ಡಾಕ್ಟರ್ ಹುದ್ದೆಗಳು ಜಾಸ್ತಿ ಖಾಲಿ ಇವೆ, ನಗರ ಪ್ರದೇಶಗಳಲ್ಲಿ ಖಾಲಿ ಇರುವ ಸ್ಥಾನಗಳು ಕಡಿಮೆ. ನಗರ ಪ್ರದೇಶಗಳಲ್ಲಿ ಆನೊರರಿ ಡಾಕ್ಟರುಗಳನ್ನು ಇಟ್ಟಿದ್ದೀರ ? ಅದರಿಂದ ಪ್ರೈವೇಟು ಪ್ರಾಕ್ಟೀಷನರುಗಳು ಸಿಗುತ್ತಾರೆ. ಹಾಗೆಯೆ ಆನೊರರಿ ವರ್ಕ್ ಮಾಡುವುದಕ್ಕೆ ಖಾಸಗಿ ಡಾಕ್ಟರುಗಳನ್ನು ಆಹ್ವಾನಿಸಿ ಗ್ರಾಮಾಂತರ ಪ್ರದೇಶಗಳಿಗೂ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಇದೀಗ ಹೇಳಿದ್ದೇನೆ, ಆನರರಿ ಸರ್ಜನ್ನುಗಳನ್ನೂ ಮತ್ತು ಅನರರಿ ಅಸಿಸ್ಟೆಂಟು ಸರ್ಜನ್ನುಗಳನ್ನೂ ಬೇರೆ ಬೇರೆ ಕಡೆಗಳಲ್ಲಿ ಕ್ರಿಯೇಟು ಮಾಡುತ್ತಾ ಇದ್ದೇವೆಂದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ರಾಜ್ಯದ ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಪಡೆದ ಡಾಕ್ಟರುಗಳು ಇಷ್ಟು ವರ್ಷ ನಮ್ಮ ಸರಕಾರದಲ್ಲಿ ಸರ್ವ್ ಮಾಡಬೇಕೆಂದು ಕಡ್ಡಾಯವಾಗಿ ವಿಧಿಸುವುದಕ್ಕೆ ನಿಯಮ ಮಾಡಿದ್ದೀರೋ ?

ಶ್ರೀ ಕೆ. ನಾಗಪ್ಪ ಆಳ್ವ.—ಕಳೆದ ವರ್ಷದಿಂದ ಪರತ್ತು ಹಾಕಿದ್ದೇವೆ.

ಶ್ರೀ ವಿ. ಮಸಿಯಪ್ಪ.—ಬೆಂಗಳೂರು ಮತ್ತು ಮೈಸೂರಿನಂಥ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲ ರಷ್ ಆಫ್ ಪೇಷೆಂಟ್ಸು ತಪ್ಪಿಸುವುದಕ್ಕೋಸ್ಕರ, ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ಪೆಷಲಿಸ್ಟ್ ಆಗಿರತಕ್ಕಂಥವರನ್ನು ಪೋಸ್ಟು ಮಾಡತಕ್ಕಂಥ ವ್ಯವಸ್ಥೆಯ ಬಗ್ಗೆ ಏನು ಯೋಜನೆ ಮಾಡಿದ್ದೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಯೋಜನೆ ಸರಕಾರದ ಮುಂದೆ ಇಪ್ಪರಲ್ಲಿಯೇ ಬರಲಿದೆ.

ಶ್ರೀ ಗೋಪಾಲ ಸಾಲೆನ್ನ.—Common recruitment rules are being framed ಎಂದು ಹೇಳುತ್ತಾ ಇದ್ದೀರಿ, ಅದರಿಂದಲೇ ಕಂಡೆನ್ಸ್‌ಡ್ ಎಂ.ಬಿ.ಬಿ.ಎಸ್. ಕೋರ್ಸ್ ಮುಗಿಸಿದ ಎಲ್.ಎಂ.ಪಿ. ಗಳಿಗೆ ಕಳೆದ 3 ವರ್ಷದಿಂದಲೂ ಎಂ.ಬಿ.ಬಿ.ಎಸ್. ಸ್ಕೇಲು ಕೊಡದಿರುವುದರಿಂದ, ಅವರಲ್ಲಿ ತುಂಬ ಅಸಮಾಧಾನವಿದೆ; ಅದನ್ನು ಕೊಡುವವರೆಗೂ ಅದಿರುತ್ತದೆ. ಈ ದಿಶೆಯಲ್ಲಿ ಸರಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇದನ್ನು ಆಗಲೆ ಹೇಳಿದೆ. ಕಾಮನ್ ರಿಕ್ರೂಟ್ ಮೆಂಟ್ ರೂಲ್ಸ್ ಈಗ ಆಗುತ್ತಾ ಇದೆ. ಸಾಧಾರಣವಾಗಿ ಒಂದು ತಿಂಗಳಲ್ಲಿ ಕಾಮನ್ ರಿಕ್ರೂಟ್ ಮೆಂಟು ರೂಲ್ಸ್ ಪ್ರಕಾರ, ಪಿ.ಎಸ್.ಸಿ. ಮುಖಾಂತರ ಅಪಾಯಿಂಟ್ ಮಾಡುತ್ತೇವೆ.

Sri. R. S. HEGDE.—How do the common recruitment rules solve the problem of paucity of doctors ?

Sri K. NAGAPPA ALVA.—It only helps us.

ಶ್ರೀ ಬಿ. ಬೈರಪ್ಪಾಜಿ.—ಏಕರೀತಿ ನೇಮಕಾತಿ ನಿಯಮಾವಳಿಯನ್ನು ರಚಿಸಲಾಗುತ್ತಿದೆ ಎಂದು ಸರ್ಕಾರದವರು ಹೇಳಿದ್ದಾರೆ. ಈ ನಿಯಮಾವಳಿ ರಚಿತವಾಗುವ ತಾರೀಖು ಯಾವುದು ? ಇದು ರಚಿತವಾದನಂತರ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸಾಧ್ಯ ?

Sri K. NAGAPPA ALVA.—The question is rather vague. I cannot give a definite reply to such a vague question.

Smt. BASAVARAJESHWARI.—May I know how much time is required to fill up at least some of the vacancies in health centres ?

Sri K. NAGAPPA ALVA.—All arrangements have been made with regard to that. As soon as we get enough number of people, these vacancies will be filled up.

ಶ್ರೀ ಗಂಗಾಧರ ನಾವೀಷಿ.—ಮೈನೂರು ಸಂಸ್ಥಾನದಲ್ಲಿ ನಂಬಳ ಕಡಮೆ ಇದ್ದ ಕಾರಣ ಯಾರೂ ಡಾಕ್ಟರುಗಳು ಬರುವುದಿಲ್ಲ. ನಂಬಳ ಹೆಚ್ಚಿಗೆ ಕೊಟ್ಟು ಅಟ್ರಾಕ್ಷನ್ ಮಾಡಿ ಬೇರೆ ಪ್ರಾಂತ್ಯದಿಂದ ಕರೆಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು ಇದೀಗ ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—517 ಖಾಲಿ ಬಿದ್ದ ಸ್ಥಾನಗಳಲ್ಲಿ 390 ಸ್ಥಾನಗಳು ಖಾಲಿ ಉಳಿದಿವೆ ಎಂದು ಹೇಳಿದಿರಿ. 390 ಜನರನ್ನು ಭರ್ತಿ ಮಾಡಲು ಡಾಕ್ಟರುಗಳು ಇಲ್ಲವೇ ? ಅಥವಾ ಅವರು ಇದ್ದರೂ ಅವರನ್ನು ಆಕರ್ಷಣೆ ಮಾಡುವಷ್ಟು ಸಂಬಳ ಕೊಡದೇ ಇರುವುದರಿಂದ ಈ ಸ್ಥಳಗಳು ಖಾಲಿ ಬಿದ್ದಿವೆಯೇ ? ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಆಸ್ಪತ್ರೆಗಳನ್ನು ಪಾಳು ಬಿಡುವುದಕ್ಕಿಂತ ಅಲ್ಲಿಗೆ ಡಾಕ್ಟರುಗಳನ್ನು ಕಳುಹಿಸಿ ಭರ್ತಿ ಮಾಡುವುದಕ್ಕೆ ಸರ್ಕಾರದವರು ಇಚ್ಛಿಸಿದ್ದಾರೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—391 ವೇಕೆನ್ಸಿಗಳು ಇವೆ. ಒಂದು ವಿಚಾರವನ್ನು ಈ ಸಭೆಯ ಮುಂದೆ ಇಡಬೇಕಾಗುತ್ತದೆ. ಇದರಲ್ಲಿ 158 ಮಂದಿ ಪೋಸ್ಟ್ ಗ್ರಾಜುಯೇಟ್ಸ್ ಸ್ಟೂಡೀಸ್‌ನಲ್ಲಿ ಇದ್ದಾರೆ ಇದನ್ನೆಲ್ಲಾ ಭರ್ತಿ ಮಾಡಲಿಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾ ಇದ್ದೇವೆ.

Sri G. V. GOWDA.—It is said that the interests of both the Departments of Public Health and Medical will be secured by amalgamating them. May I know when they will finalise the matter ?

Sri K. NAGAPPA ALVA.—We have already finalised that. It is only to be implemented now.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಅದಷ್ಟು ಜಾಗ್ರತೆ ಈ ಎಲ್ಲಾ ಆಸ್ಪತ್ರೆಗಳಲ್ಲೂ ಡಾಕ್ಟರುಗಳನ್ನು ಒದಗಿಸುತ್ತೇವೆ ಎಂದು ಅಶ್ವಾಸನೆ ಕೊಡಿಸಿದಿರಿ, ಈಗ ಗುಲ್ಬರ್ಗ ಮತ್ತು ಬೆಳಗಾಂ ಮೆಡಿಕಲ್ ಕಾಲೇಜುಗಳಲ್ಲಿ ಹೊರಗಿನಿಂದ ಬಂದಿರತಕ್ಕವರ ಸಂಖ್ಯೆಯೇ ಜಾಸ್ತಿಯಾಗಿರುವಾಗ ಅವರು ಪಾಸ್ ಮಾಡಿದ ಮೇಲೆ ಅವರವರ ರಾಜ್ಯಗಳಿಗೆ ಹೋಗುತ್ತಾರೆಯಲ್ಲಾ ಅಂತಹವರಿಗೆ ಹಾಕಿರತಕ್ಕ ಷರತ್ತುಗಳು ಅವರು ಆ ರೀತಿ ಹೋಗದಂತೆ ಯಾವ ರೀತಿ ಬಂದಿನುತ್ತವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಮುಖ್ಯ ಪ್ರಶ್ನೆಗೂ ಈಗಿನ ಪ್ರಶ್ನೆಗೂ ಸಂಬಂಧವಿಲ್ಲ.

Sri S. RUDRAPPA.—Has it come to the notice of the Government that 17 hospitals in Gulbarga are not provided with doctors ? If so, what action has been taken ?

Sri K. NAGAPPA ALVA.—I do not know the number and all that. That has been brought to my notice and I will look into it.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ತಿಪಟೂರಿನ ಜನರಲ್ ಆಸ್ಪತ್ರೆಗೆ ಎರಡು ಲಕ್ಷ ರೂಪಾಯಿಗಳ ಕಟ್ಟಡ ಮತ್ತು 40 ಸಾವಿರ ರೂಪಾಯಿಗಳ ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ ಅನ್ನು ಹಾಕಿದ್ದಾರೆ. ಆದರೂ ಇದುವರೆಗೂ ಡಾಕ್ಟರುಗಳನ್ನು ಅಲ್ಲಿಗೆ ಹಾಕಿಲ್ಲ, ಆಸ್ಪತ್ರೆ ಕೂಡ ಊರಿಗೆ ಎರಡು ಮೈಲಿ ದೂರದಲ್ಲಿ ಇದೆ. ಅಲ್ಲಿಗೆ ಡಾಕ್ಟರುಗಳನ್ನು ಹಾಕದೇ ಇರುವುದಕ್ಕೆ ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಇದೇ ಸಭೆಯಲ್ಲಿ ಇದೇ ಪ್ರಶ್ನೆಯನ್ನು ಮಾನ್ಯ ಸದಸ್ಯರು ಹಾಕಿದ್ದಾರೆ ಆ ಸಮಯದಲ್ಲಿ ನಾನು ಬೇಕಾದ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—158 ಡಾಕ್ಟರುಗಳು ಪೋಸ್ಟ್ ಗ್ಯಾಜ್ಯುಯೇಟ್ ಸ್ಟಡೀಸ್‌ನಲ್ಲಿ ದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅಲ್ಲಿ ಅರಿಸಿದ ಕೆಲವರಿಗೆ ಇನ್ನೂ ನಂಬಿಳವು ಸಿಕ್ಕಿಲ್ಲ ಎಂಬುದು ಗೊತ್ತಿದೆಯೇ ?

Sri K. NAGAPPA ALVA.—A separate question may be put.

Teachers Training Colleges in the State.

*Q.—556. Smt. G. C- BHAGEERATHAMMA (Tumkur).—

Will the Government be pleased to state :—

(*a*) the number of Teachers Training Colleges in the State ;

(*b*) out of them the number of Government and Private Colleges ;

(*c*) whether they are giving any grant to these privately managed Colleges ?

A.—Sri S. R. KANTHI (Minister for Education).—

(*a*)—

(i) Teachers Training Institutes (Undergraduate)	...	69
(ii) Teachers Training Colleges (Post-graduate)	...	15
Total	...	84

(*b*)—

(i) Teachers Training Institutions (Undergraduate):

Government	...	37
Private	...	32
Total	...	69

(ii) Teachers Training Colleges (Post-graduate's) :

Government	...	6
Private	...	9
Total	...	15

(*c*) Yes.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ಪ್ರೈವೇಟ್ ಕಾಲೇಜುಗಳಿಗೆ ಸರ್ಕಾರದಿಂದ ಎಷ್ಟು ಹಣ ಕೊಡುತ್ತಾ ಇದ್ದೀರಿ :